ಮಾತನ್ನು ತಾವು ಈ ಸದನದ ಮೂಲಕ ಹೇಳಬೇಕೆಂದು ನಾನು ಮನವಿ ಮಾಡುತ್ತೇನೆ.

ಶ್ರೀ ಶಿವರಾಜ್ ತಂಗಡಗಿ: ಮಾನ್ಯ ಅಧ್ಯಕ್ಷರೆ, ಈ ಎಸ್.ಎಂ.ಪಿ. ರೇಟ್ ಏನಿತ್ತೋ ಅದಕ್ಕಿಂತ ಹೆಚ್ಚಿನ ರೇಟ್‌ನ್ನೇ ಕಾರ್ಖಾನೆಯವರು ಅಗ್ರಿಮೆಂಟ್‌ನಲ್ಲಿ ಹೇಳಿದ್ದಾರೆ. ಆದುದರಿಂದ ಅವರು ಅಗ್ರಿಮೆಂಟ್ ಮಾಡಿಕೊಂಡಿರುವ ಪ್ರಕಾರ ಆ ರೇಟ್‌ನ್ನು ರೈತರಿಗೆ ಕೊಡಲೇಬೇಕು. ಎಸ್.ಎಂ.ಪಿ. ರೇಟ್ 2006-07ರಲ್ಲಿ 928 ರೂಪಾಯಿ 50 ಪೈಸೆ ಮಾತ್ರ ಇತ್ತು. ಆದರೆ ರೈತರ ಜೊತೆಗೆ ಅವರು ಅಗ್ರಿಮೆಂಟ್ ಮಾಡಿಕೊಂಡಿದ್ದು 1140 ರೂಪಾಯಿ ಆಗಿತ್ತು. ಇವತ್ತೇನಾಗಿದೆಯೆಂದರೆ, ರೈತರ ಜೊತೆ ಅಗ್ರಿಮೆಂಟ್ ಆದ ಮೇಲೆ ಅದೇ ಬೆಲೆಯನ್ನು ಕೊಡಬೇಕಾದ್ದು ಅವರ ಕರ್ತವ್ಯ. ಆದರೂ ಕೂಡ ನಾವು ಬಾಕಿ ಕೊಡಬೇಕೆಂದು ಅವರಿಗೆ instruction ಕೊಟ್ಟಿದ್ದರೂ ಕೂಡ ಆ ಕಾರ್ಖಾನೆಯವರು ನ್ಯಾಯಾಲಯಕ್ಕೆ ಹೋಗಿದ್ದಾರೆ. ನ್ಯಾಯಾಲಯದಿಂದ ಒಂದು ಆದೇಶವೇನು ಬಂದಿದೆಯೆಂದರೆ, ಬಾಕಿ ಕೊಡಬೇಕೆಂದು ಕಾರ್ಖಾನೆಯವರಿಗೆ ಆದೇಶ ಮಾಡುವುದಕ್ಕೆ ಕಾನೂನಿನಲ್ಲಿ ನಿಮಗೆ ಅಧಿಕಾರವಿದೆಯೆ ಎಂದು ಕೇಳಿರುವ ಫೈಲ್ ಕಬ್ಬು ಆಯುಕ್ತರ ಕಛೇರಿಯಲ್ಲಿದೆ. ಆದಷ್ಟು ಬೇಗನೇ ಈ ವಿಚಾರದಲ್ಲಿ ರೈತರ ಪರವಾಗಿಯೇ ಇತ್ಯರ್ಥವನ್ನು ನಾನು ಮಾಡುತ್ತೇನೆ. ಸ್ಥಳೀಯ ಶಾಸಕರು ಮತ್ತು ರೈತರನ್ನು ಕರೆದು ಆದಷ್ಟು ಬೇಗನೆ ಈ ಬಗ್ಗೆ ಇತ್ಯರ್ಥ ಮಾಡುತ್ತೇನೆ.

ಬಸವ ಕಲ್ಯಾಣ ಪಟ್ಟಣದಲ್ಲಿ ಎ.ಪಿ.ಎಂ.ಸಿ. ವತಿಯಿಂದ ನಿರ್ಮಿಸಲಾಗಿರುವ ಮಳಿಗೆಗಳು

1220 ಶ್ರೀ ಬಸವರಾಜ್ ಪಾಟೀಲ್ ಆಟ್ಟೂರು (ಬಸವಕಲ್ಯಾಣ) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಸವಕಲ್ಯಾಣ ಪಟ್ಟಣದಲ್ಲಿ ಎ.ಪಿ.ಎಂ.ಸಿ. ವತಿಯಿಂದ ನಿರ್ಮಿಸಲಾಗಿರುವ ಒಟ್ಟು ಮಳಿಗೆಗಳ ಸಂಖ್ಯೆ ಎಷ್ಟು;

ಅ) ಪಟ್ಟಣದ ಗಂಜ್ ಪ್ರದೇಶ ಮತ್ತು ರೈತ ಭವನದ ಸುತ್ತ ಮುತ್ತ ಇನ್ನು ಸಾಕಷ್ಟು ಸ್ಥಳಾವಕಾಶ ಲಭ್ಯವಿದ್ದು ಈ ಸ್ಥಳಗಳಲ್ಲಿ ಹೊಸದಾಗಿ ಮಳಿಗೆಗಳನ್ನು ನಿರ್ಮಾಣ ಮಾಡಿ ರೈತರಿಗೆ/ವರ್ತಕರಿಗೆ ನೀಡಲು ಸರ್ಕಾರ ಕ್ರಮ ಕೈಗೊಳ್ಳುವುದೇ;

ಇ) ಪ್ರಸಕ್ತ ಸಾಲಿನಲ್ಲಿ ಎ.ಪಿ.ಎಂ.ಸಿ. ವತಿಯಿಂದ ಯಾವ ಯಾವ ಅಭಿವೃದ್ಧಿ ಕೆಲಸಗಳನ್ನು ಯಾವ ಯಆವ ಅನುದಾನದಿಂದ ತೆಗೆದುಕೊಳ್ಳಲಾಗಿದೆ ಇದರ ಅಂದಾಜು ವೆಚ್ಚವೆಷ್ಟು;

ಈ) ಈ ಪಟ್ಟಣದ ರೈತ ಭವನ ಬಸವ ಗಂಜ್ ಪ್ರದೇಶ ಹಾಗೂ ದನಗಳನ್ನು ಮಾರಾಟ ಮಾಡುವ ಪ್ರದೇಶದಲ್ಲಿ ರಸ್ತೆ ಸೌಕರ್ಯ ಮತ್ತು ಕುಡಿಯುವ ನೀರಿನ ಸರಬರಾಜು ಯೋಜನೆ ಸೇರಿದಂತೆ ಇನ್ನಿತರ ಮೂಲಭೂತ ಸೌಕರ್ಯಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಹಾಗಿದ್ದಲ್ಲಿ ಕೃಷಿ ಮಾರುಕಟ್ಟೆ ಅನುದಾನದಿಂದ ಮೇಲ್ಕಂಡ ಸ್ಥಳಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ? (ವಿವರ ನೀಡುವುದು)

ಶ್ರೀ ಶಿವರಾಜ್ ಎಸ್. ತಂಗಡಗಿ (ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು)

ಅ) ಬಸವಕಲ್ಯಾಣ ಎ.ಪಿ.ಎಂ.ಸಿ. ವತಿಯಿಂದ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಒಟ್ಟು 25 ಸಂಖ್ಯೆ ಚಿಕ್ಕ ಮಳಿಗೆಗಳನ್ನು ನಿರ್ಮಿಸಲಾಗಿದೆ.

ಆ) ಸಮಿತಿಯ ಆರ್ಥಿಕ ಪರಿಸ್ಥಿತಿ ಸುಧಾರಿಸಿದ ನಂತರ ಹಂತ ಹಂತವಾಗಿ ಮಳಿಗೆಗಳನ್ನು ನಿರ್ಮಾಣ ಮಾಡಿ ಅರ್ಹ ವರ್ತಕರಿಗೆ ನೀಡಲು ಕ್ರಮ ಕೈಗೊಳ್ಳಲಾಗುವುದು.

ಇ) 2008--09ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಲ್ಲಿ ಕೈಗೊಂಡ ಅಭಿವೃದ್ಧಿ ಕೆಲಸಗಳ ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.

2009--10ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತ್ ಯೋಜನೆಯಡಿಯಲ್ಲಿ ರೂ. 3,00 ಲಕ್ಷದ ಅನುದಾನದಲ್ಲಿ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಕಾಮಗಾರಿಯನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ.

ಈ) ಮೂಲಭೂತ ಸೌಕರ್ಯಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಉ) ಸರ್ಕಾರದ ಮುಂದೆ ಪ್ರಸ್ತಾವನೆ ಇರುವುದಿಲ್ಲ. ಆದರೆ, ಸಮಿತಿಯ ಆರ್ಥಿಕ ಪರಿಸ್ಥಿತಿಗನುಗುಣವಾಗಿ ನಿಯಮಾನುಸಾರ ವಾರ್ಷಿಕಕ್ರಿಯು ಯೋಜನೆಗಳಲ್ಲಿ ಅವಶ್ಯವಿರುವ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು.

ಅನುಬಂಧ

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬಸವಕಲ್ಯಾಣ

ವಾರ್ಷಿಕ ಕ್ರಿಯಾ ಯೋಜನೆಯಡಿ ಕೈಗೊಂಡ ಬಾಕಿ ಇರುವ ಕಾಮಗಾರಿಯ ಪ್ರಗತಿ ವರದಿ

ಕ್ರ. ಸಂ.	ಕಾಮಗಾರಿಯ ಹೆಸರು	ರೇಖಾ ಅಂದಾಜು ಮೊತ್ತ	ತಾಂತ್ರಿಕ ಮಂಜೂರಾತಿ	ಟೆಂಡರ್ ಒಟ್ಟು ಮೊತ್ತ	ಕೆಲಸ ವಹಿಸಿದ ವಿಧಾನ	ಗುತ್ತಿಗೆದಾರರ ಹೆಸರು	ಪೂರ್ಣಗೊಳಿಸುವ ಅವಧಿ	ಆದೇಶ ದಿನಾಂಕ	ಪ್ರಸ್ತುತ ತಿಂಗಳ ಖರ್ಚು	ಒಟ್ಟು ಖರ್ಚಾದ ಮೊತ್ತ	ಪ್ರಗತಿ
1	2	3	4	5	6	7	8	9	10	11	12
1	ಕೃಉ.ಮಾ.ಸ. ಬ.ಕ.ಮು.ಮಾ. ಪ್ರಾಂ ದಲ್ಲಿ ಪೂರ್ವ ದಿಕ್ಕಿಗೆ ಸ್ವಾಗತ ದ್ವಾರ ನಿರ್ಮಿಸುವುದು	47000	47000	47000	ತುಂಡು ಗುತ್ತಿಗೆ	ರವೀಂದ್ರ ರಾಸುರೆ	2 ತಿಂಗಳು	2-12-03	–	–	ಕಾಮಗಾರಿ ಪೂರ್ಣಗೊಂಡಿದೆ
2	ಕೃಉ.ಮಾ.ಸ. ಬ.ಕ.ಮು.ಮಾ. ಪ್ರಾಂ ದಲ್ಲಿ ದಕ್ಷಿಣ ದಿಕ್ಕಿಗೆ ಸ್ವಾಗತ ದ್ವಾರ ನಿರ್ಮಿಸುವುದು	47500	47500	47500	ತುಂಡು ಗುತ್ತಿಗೆ	ರವೀಂದ್ರ ರಾಸುರೆ	2 ತಿಂಗಳು	2-12-03	–	–	ಸ್ಥಳ ತಕರಾರು ಇತ್ಯರ್ಥಗೊಳಿಸಿ ಕೆಲಸ ಪ್ರಾರಂಭಿಸಲಾಗಿದೆ

1	2	3	4	5	6	7	8	9	10	11	12
3	ಮು.ಮಾ.ಪ್ರಾಂದಲ್ಲಿ ಕೊಳವೆ ಬಾವಿ ಕೊರೆದು ಹ್ಯಾಂಡ್ ಪಂಪ್ ಅಳವಡಿಸುವುದು	71000	75000	81000	ಟೆಂಡರ್	ಹುಜೂರ ಪಾಶಾ	15 ದಿವಸ	5–7–05	–	42366	ಕೊಳವೆ ಬಾವಿ ಅಳವಡಿಸಲಾಗಿ ಹ್ಯಾಂಡ್ ಪಂಪ್ ಅಳವಡಿಸ ಬೇಕಾಗಿದೆ
4	ಜಾನುವಾರು ಮಾರುಕಟ್ಟೆಯ ಪ್ರಾಂಗಣದಲ್ಲಿ ದನದ ಕೊಟ್ಟಿಗೆ ನಿರ್ಮಿಸುವುದು	500000	500000	496125	ಟೆಂಡರ್	ಬಂಡೆಪ್ಪಾ ಪಾಟೀಲ್	3 ತಿಂಗಳು	7–12–07	–	1.85	ಕೆಲಸ ಪ್ರಗತಿಯಲ್ಲಿದೆ
5	ಜಾನುವಾರು ಮಾರುಕಟ್ಟೆಯಲ್ಲಿ ನೆರಳಿನ ಗಿಡ ನೆಡುವುದು	25000	25000	–	–	–	–	–	–	–	ಕಾಮಗಾರಿ ವಹಿಸಲಾಗಿದೆ
6	ಆಡಳಿತ ಕಛೇರಿಯ ದುರಸ್ಥಿ ಹಾಗೂ ಸುಧಾರಣೆ	100000	100000	–	–	ಶಶಿಕಾಂತ ಆರ್ ಗುರಣ್ಣಾ	–	17–9–08	–	125416	ಕಾಮಗಾರಿ ಪೂರ್ಣ ಗೊಂಡಿದೆ

1	2	3	4	5	6	7	8	9	10	11	12
7	ಜಾ.ಮಾ.ಯಲ್ಲಿ ಸವುಳ ಮಣ್ಣು ಇರುವ ಪ್ರಯುಕ್ತ ಅದರೆ ಮೇಲೆ ಕೆಂಪು ಮಣ್ಣು ಹರಡಿ ಗಟ್ಟಿ ಮಾಡುವುದು	175000	178000	171200	ಟೆಂಡರ್	ಸುಭಾಷ ಜಾದವ	1 ತಿಂಗಳು	7-12-07	–	185005	ಕೆಲಸ ಮುಗಿದಿರುತ್ತದೆ
8	ಹತ್ತು ಚಿಕ್ಕ ಮಳೆಗೆಗಳ ಮುಂದೆ ಮುರ್ರಂ ಹಾಕಿ ಸಮನಾಗಿ ಮಾಡುವುದು	100000	48000	48000	–	–	–	–	–	–	ಕಾಮಗಾರಿ ವಹಿಸ ಬೇಕಾಗಿದೆ
9	ಮು.ಮಾ.ಪ್ರಾಂ. ದಲ್ಲಿ 10 ಚಿಕ್ಕ ಮಳೆಗೆಗಳ ಹಿಂದೆ ಖಾಲಿ ಇರುವ ಜಾಗಕ್ಕೆ ಕಾಂಪೌಂಡ್ ನಿರ್ಮಿಸುವುದು	150000	150000	148300	ಟೆಂಡರ್	ರವೀಂದ್ರ ರಾಸೂರೆ	45 ದಿನಗಳು	17-9-08	–	157251	ಕಾಮಗಾರಿ ಪೂರ್ಣ ಗೊಂಡಿರುತ್ತದೆ

1	2	3	4	5	6	7	8	9	10	11	12
10	ಎಸ್.ಎಫ್.ಡಿ.ಎ. ಗೋದಾಮು ಸಂ.3ರ ವಿಶೇಷ ನಿರ್ವಹಣೆ	150000	150000		ಟೆಂಡರ್	ಸುಭಾಷ ಜಾದವ್	45 ದಿನಗಳು	17–9–08		155933	ಕಾಮಗಾರಿ ಪೂರ್ಣ ಗೊಂಡಿರುತ್ತದೆ
11	ಜಾನುವಾರು ಮಾರುಕಟ್ಟೆಯಲ್ಲಿ ಸುತ್ತಲೂ ತಂತಿ ಬೇಲಿ ಅಳವಡಿಸುವುದು	200000	200000	198200	ಟೆಂಡರ್	ಸುಭಾಷ ಜಾದವ್	3 ತಿಂಗಳು	17–9–08		207279	ಕಾಮಗಾರಿ ಪೂರ್ಣ ಗೊಂಡಿರುತ್ತದೆ
12	ಎಸ್.ಎಫ್.ಡಿ.ಎ. ಗೋದಾಮು ಸಂ.1ರ (ಬೆಡ್ ಹಾಕಿ) ಸರಿಪಡಿಸುವುದು	50000	50000	49476	ತುಂಡು ಗುತ್ತಿಗೆ	ಸೋಮನಾಥ ಸಂಗೋಳಗೆ	45 ದಿನಗಳು	–	–	49476	ಕಾಮಗಾರಿ ಪೂರ್ಣ ಗೊಂಡಿರುತ್ತದೆ
13	ರೈತ ಭವನದ ಸುತ್ತ ಬಣ್ಣ ಮಾಡಿಸುವುದು	50000	50000	49970	ತುಂಡು ಗುತ್ತಿಗೆ	ರವೀಂದ್ರ ರಾಸುರೆ	45 ದಿನಗಳು	3–4–08	49681	49681	ಕೆಲಸ ಮುಗಿದಿದೆ
14	ರೈತ ಭವನದ ಎದುರುಗಡೆ ಸಿ.ಸಿ. ರೋಡ್ ನಿರ್ಮಿಸುವುದು	100000	100000	199952	ಟೆಂಡರ್	ಕಾರಪ್ಪಾ ಸಕ್ಕರೆ ಭಾವೆ	30 ದಿನಗಳು	17–9–08	–	104813	ಕಾಮಗಾರಿ ಪೂರ್ಣ ಗೊಂಡಿದೆ

1	2	3	4	5	6	7	8	9	10	11	12
15	ಕಛೇರಿಯ ಎದುರುಗಡೆ ಡಾಂಬರೀಕರಣ ಗೊಳಿಸುವುದು	100000	100000	99770	ಟೆಂಡರ್	ಶಶಿಕಾಂತ ಗುರಣ್ಣ	45 ದಿನಗಳು	11-9-08	–	104378	ಕೆಲಸ ಮುಗಿದಿದೆ
16	ರೈತ ಭವನದ ಆವರಣದಲ್ಲಿ ಗಾರ್ಡನ್ ಮಾಡುವುದು	50000	50000	49982	ತುಂಡು ಗುತ್ತಿಗೆ	ಬಾನು ಪ್ರಸಾದ ಪಾಂಡೆ	30 ದಿನಗಳು	–	–	49000	ಕಾಮಗಾರಿ ಪೂರ್ಣ ಗೊಂಡಿದೆ
17	ಮು.ಮಾ.ಪ್ರಾಂ. ದಲ್ಲಿ ನಿರ್ಮಿಸಿದ ವೆ.ಚಿ.ಗೆ ಹೋಗುವ ರಸ್ತೆಗೆ ಡೆಕ್ ಸ್ಲ್ಯಾಬ್ ನಿರ್ಮಿಸುವುದು	50000	50000	49970	ತುಂಡು ಗುತ್ತಿಗೆ	ಶಶಿಕಾಂತ ಗುರಣ್ಣಾ	45 ದಿನಗಳು	5-8-08	49970	49970	ಕೆಲಸ ಮುಗಿದಿದೆ
18	ಮು.ಮಾ.ಪ್ರಾಂತದಲ್ಲಿ ಉತ್ತರ ಭಾಗದ ರಸ್ತೆಯಿಂದ ದಕ್ಷಿಣ ಭಾಗದ ರಸ್ತೆಯವರೆಗೆ ಸ್ಲಿ.ಸಿ. ರಸ್ತೆ ನಿರ್ಮಿಸುವುದು	200000	200000	199980	ಟೆಂಡರ್	ಬಸವರಾಜ ಕೆ. ಡೊಣಗಾವೆ	45 ದಿನಗಳು	17-9-08	–	206801	ಕೆಲಸ ಮುಗಿದಿದೆ

ಶ್ರೀ ಬಸವರಾಜ ಪಾಟೀಲ್ ಅಟ್ಟೂರ್: ಮಾನ್ಯ ಅಧ್ಯಕ್ಷರೆ, ಬಸವಕಲ್ಯಾಣ ಒಂದು ಪ್ರಸಿದ್ಧವಾದ ಸ್ಥಳವಾಗಿದ್ದು ಅಲ್ಲಿಯ ಎ.ಪಿ.ಎಂ.ಸಿ.ಯ ಮಾರುಕಟ್ಟೆಯಲ್ಲಿ ಬಹಳ ರೈತರಿಗೆ, ಮಳಿಗೆಗಳು ಇಲ್ಲ. ತಮಗೆಲ್ಲರಿಗೂ ಗೊತ್ತಿಗೆ, ನಮ್ಮ ಬಸವಕಲ್ಯಾಣ ಮತ್ತು ಬಾಲ್ಕಿಗಳು ಗಡಿ ಪ್ರದೇಶಗಳಾಗಿವೆ. ಹೀಗಾಗಿ ಸಾಕಷ್ಟು ರೈತರು ಬೆಳೆದಂಥ ಬೆಳೆಗಳು ಮಹಾರಾಷ್ಟ್ರಕ್ಕೇ ಹೋಗುತ್ತಿವೆ. ಕರ್ನಾಟಕಕ್ಕೇ ಅವುಗಳನ್ನು ಮಾರಾಟ ಮಾಡುವುದಿಲ್ಲ. ಮಾನ್ಯ ಮಂತ್ರಿಗಳಲ್ಲಿ ನಾನು ಕೇಳುವಂಥ ಪ್ರಶ್ನೆಯೆಂದರೆ, ಎ.ಪಿ.ಎಂ.ಸಿ. ಯಲ್ಲಿ ಹೊರಾಂಗಣದಲ್ಲಿರುವ ಜಾಗವೇನಿದೆ ಅಲ್ಲಿ complex ಕಟ್ಟಿಕೊಡಿ ಎಂದು ಅಲ್ಲಿ ವ್ಯಾಪಾರ ಮಾಡುವ ವ್ಯಾಪಾರಸ್ಥರು ಮತ್ತು ಇತರ ಜನರು ಕೇಳುತ್ತಿದ್ದಾರೆ.

ಶ್ರೀ ಬಸವರಾಜ ಪಾಟೀಲ್ ಅಟ್ಟೂರು: ಮಾನ್ಯ ಅಧ್ಯಕ್ಷರೇ, complex ಕಟ್ಟಿಕೊಡ ಬೇಕೆನ್ನುವ ವಿಚಾರದಲ್ಲಿ ಈಗಾಗಲೇ ತಮ್ಮನ್ನು ಒಂದೆರಡು ಬಾರಿ ಭೇಟಿಯಾಗಿದ್ದೇನೆ ಹಾಗೂ ನಿಮ್ಮ ನಿರ್ದೇಶಕರನ್ನು ಕೂಡ ಭೇಟಿಯಾಗಿದ್ದೇನೆ. ಆದರೆ ಅಲ್ಲಿ ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ. ಮೂಲ ಪ್ರಶ್ನೆ ಏನೆಂದರೆ APMCಯಲ್ಲಿ ಮಳಿಗೆ ಕಟ್ಟಿಸಿಕೊಡುವಂತಹ ಕೆಲಸ ಮತ್ತು ಇದ್ದಂತಹ ಜಾಗವನ್ನು ಸಿಸಿ ರೋಡ್ ಮಾಡಿದರೆ, ಅಲ್ಲಿಗೆ ಬಂದಂತಹ ರೈತರಿಗೆ ಮಾಲನ್ನು ಇಟ್ಟುಕೊಳ್ಳುವುದಕ್ಕೆ ಆಗುತ್ತದೆ. ಅಲ್ಲಿ ಹೇಗೆ ಮಾಡುತ್ತೀರಿ ಎನ್ನುವುದನ್ನು ತಿಳಿಸಿ. ಎರಡನೆಯದಾಗಿ ಬಸವ ಗಂಜ್‌ನಲ್ಲಿ ರೈತಭವನ ಕಟ್ಟಿದ್ದಾರೆ. ಆ ರೈತಭವನದ ಪರಿಸ್ಥಿತಿಯನ್ನು ನೋಡಿದರೆ ನನಗೆ ಬೇಜಾರಾಗುತ್ತದೆ. ಅಲ್ಲಿ ಒಂದು ವ್ಯವಸ್ಥೆ ಕೂಡ ಸರಿಯಾದ ರೀತಿಯಲ್ಲಿ ಇಲ್ಲ. ನೀರಿನ ವ್ಯವಸ್ಥೆ ಕೂಡ ಇಲ್ಲ. ಅಲ್ಲಿ ರೈತರು ಮಾಲನ್ನು ಮಾರಾಟ ಮಾಡುವುದಕ್ಕೆ ಬಂದರೆ ಅಲ್ಲಿನ ಜಾಗ ಬಹಳ ಅಸ್ತವ್ಯಸ್ತ ಇದೆ. ನಾನು ಹೇಳಬೇಕೆಂದರೆ ಈ ಇಲಾಖೆ ಇದೆಯೋ ಇಲ್ಲವೋ ಎನ್ನುವ ಅನುಮಾನ ಬರುತ್ತಿದೆ. ಅದನ್ನು ನಾನು ಬಹಳ ಸ್ಪಷ್ಟವಾಗಿ ನಿಮ್ಮ ಎದುರಿನಲ್ಲಿ ಹೇಳುತ್ತಿದ್ದೇನೆ. ಮುಖ್ಯವಾಗಿ ಬಸವಕಲ್ಯಾಣದಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ದನಗಳ ಬಜಾರ್ ಶನಿವಾರ ಮತ್ತು ರವಿವಾರ ನಡೆಯುತ್ತದೆ. ಅಲ್ಲಿ ದೊಡ್ಡ ಪ್ರಮಾಣದಲ್ಲಿ ದನಗಳ ಬಜಾರ್ ಇದೆ, cattle market ಇದೆ ಅದನ್ನು ಅಭಿವೃದ್ಧಿ ಪಡಿಸಬೇಕು. ಅದನ್ನು ಅಭಿವೃದ್ಧಿಪಡಿಸುವುದಕ್ಕೆ ನಿಮ್ಮ ಇಲಾಖೆಯಿಂದ ಏನಾದರೂ ಸಹಾಯ ಮಾಡಿ ಅಥವಾ ಲೋನ್ ತೆಗೆದುಕೊಂಡು ಅಭಿವೃದ್ಧಿ

ಪಡಿಸುವಂತಹ ಕ್ರಮವನ್ನು ನೀವು ಏಕೆ ಮಾಡುತ್ತಿಲ್ಲವೆಂದು ತಾವು ನಿಖರವಾಗಿ ಹೇಳಬೇಕೆಂದು ನಾನು ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ.

ಶ್ರೀ ಶಿವರಾಜ್ ಎಸ್. ತಂಗಡಗಿ: ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು APMC ಕಟ್ಟಡದ ಬಗ್ಗೆ ಕೇಳಿದ್ದಾರೆ. 2007–08ನೇ ಸಾಲಿನಲ್ಲಿ 18 ಮಳಿಗೆಗಳನ್ನು ಕಟ್ಟುವುದಕ್ಕೆ ಪ್ರಸ್ತಾವನೆ ಬಂದಿತ್ತು. ಆ ಪ್ರಸ್ತಾವನೆಯನ್ನು ನಾವು ಅಪ್ರೂವ್ ಮಾಡಿ ಕಳುಹಿಸಿದ್ದೇವೆ. ಈ ಗಡಿ ಭಾಗದಲ್ಲಿರುವಂತಹ APMCಗೆ ಸರ್ಕಾರದಿಂದ ನಮಗೆ ಬಹಳ ದುಡ್ಡು ಬರುವುದಿಲ್ಲ. ನಾವು ಯಾವ APMCಯಿಂದ ಸೆಸ್ collect ಮಾಡುತ್ತೇವೆ, ಆದರಿಂದಲೇ ಮಾರುಕಟ್ಟೆಯನ್ನು develop ಮಾಡಬೇಕೆಂದು ನಮಗೆ ಸೂಚನೆ ಇರುವುದರಿಂದ, ಕಳೆದ ವರ್ಷ 40 ಲಕ್ಷ ರೂಪಾಯಿ ಸೆಸ್ ಕಲೆಕ್ಷನ್ ಆಗಿತ್ತು. ಆ 40 ಲಕ್ಷ ರೂಪಾಯಿಯಲ್ಲಿ ಮಳಿಗೆಯನ್ನು ಮಾಡಿದ್ದೇವೆ. 2009–10ರಲ್ಲಿ ಯಾವುದೇ APMCಯಿಂದ ನಮಗೆ ಪ್ರಸ್ತಾವನೆ ಬಂದಿಲ್ಲ. ಆದರೆ ಇವತ್ತು ಮಾನ್ಯ ಸದಸ್ಯರು ಮಳಿಗೆ ಕಟ್ಟಡದ ಬಗ್ಗೆ ಹೇಳಿದರು ಮತ್ತು ಸಿಸಿ ರೋಡ್ ಬಗ್ಗೆ ಕೂಡ ಹೇಳಿದರು. ಅಲ್ಲಿ APMC ಅಧಿಕಾರಿಗಳಿಗೆ ಸೂಚನೆ ಕೊಟ್ಟು ಮೂಲಭೂತ ಸೌಕರ್ಯಗಳ ಅವಶ್ಯಕತೆ ಏನಿದೆ, ಅದಕ್ಕೆ ಅಲ್ಲಿಂದ ಪ್ರಸ್ತಾವನೆಯನ್ನು ತರಿಸಿಕೊಂಡು ಅಲ್ಲಿನ ಹಣಕಾಸಿನ ವ್ಯವಸ್ಥೆಯನ್ನು ನೋಡಿಕೊಂಡು ಹಂತ ಹಂತವಾಗಿ ಮೂಲಭೂತ ಸೌಕರ್ಯವನ್ನು ಒದಗಿಸಿ ಕೋಡುವಂತಹ ವ್ಯವಸ್ಥೆಯನ್ನು ಮಾಡುತ್ತೇವೆ. ಅಲ್ಲದೆ ದನಗಳ ಸಂತೆ ಬಗ್ಗೆ ಮಾನ್ಯ ಸದಸ್ಯರು ಹೇಳಿದರು. ಅಲ್ಲಿಗೆ ಬೇಕಾಗಿರುವ ಮೂಲಭೂತ ಸೌರ್ಕಗಳ ವ್ಯವಸ್ಥೆಗಳಾದ ಕುಡಿಯುವ ನೀರು ಮತ್ತು ದನಗಳಿಗೆ ನೀರು ಕುಡಿಯುವುದಕ್ಕೆ ಟ್ಯಾಂಕನ್ನು ಕೊಡುವ ವ್ಯವಸ್ಥೆಯನ್ನು ಮಾಡುವುದರ ಮೂಲಕ ಬಸವಕಲ್ಯಾಣ APMCಯನ್ನು ಹಂತ ಹಂತವಾಗಿ ಅಭಿವೃದ್ಧಿ ಮಾಡುವಂತಹ ಕೆಲಸವನ್ನು ಮಾಡುತ್ತೇವೆ ಎಂದು ಹೇಳುತ್ತೇನೆ.

ಶ್ರೀ ಬಸವರಾಜ್ ಪಾಟೀಲ್ ಅಟ್ಟೂರು: ಮಾನ್ಯ ಅಧ್ಯಕ್ಷರೇ, ನಾನು ಮಾನ್ಯ ಮಂತ್ರಿಗಳಿಗೆ ಕೇಳುವುದೇನೆಂದರೆ ನಮ್ಮಲ್ಲಿ ಸೆಕ್ರೆಟರಿ ಪೋಸ್ಟಿಂಗ್ ಕೊಟ್ಟಿಲ್ಲ. ಒಬ್ಬರು ಅಧಿಕಾರಿಗಳೂ ಕೂಡ ಅಲ್ಲಿ ಇರುವುದಿಲ್ಲ. ಅವರು ಬಂದು ಅಲ್ಲನ ಕೆಲಸ ನೋಡುವುದಿಲ್ಲ. ಅಲ್ಲಿನ ಪರಿಸ್ಥಿತಿ ನೋಡಿದರೆ ಆ ಇಲಾಖೆಯ ಅಧಿಕಾರಿಗಳು ಎಲ್ಲಿರುತ್ತಾರೋ ಏನು ಎನ್ನುವುದು ಗೊತ್ತಾಗುವುದಿಲ್ಲ. ನಿಮ್ಮ ಇಲಾಖೆಯಲ್ಲಿ ಸಾಕಷ್ಟು ಸಾಲ ಕೊಡುತ್ತಾರೆ. ಸಾಲ ತೆಗೆದುಕೊಂಡಾದರೂ

ನಮಗೆ ಮಾಡಿಕೊಡಿ. ನಂಜುಂಡಪ್ಪ ವರದಿಯಂತೆ ಅನುಷ್ಠಾನ ಮಾಡುವುದಕ್ಕೆ ಸಾಷ್ಟು ಹಣ ಇದೆ. ಅದನ್ನಾದರೂ ತೆಗೆದುಕೊಂಡು ಅಭಿವೃದ್ಧಿ ಮಾಡಿದರೆ ಒಳ್ಳೆಯದು. ನಮ್ಮ ಭಾಗದ ರೈತರು ಮಾರಾಟ ಮಾಡುವುದಕ್ಕೆ ಲಾತೂರಿಗೆ ಹೋಗುತ್ತಿದ್ದಾರೆ. ಹೀಗಾಗಿ ನಮ್ಮ ಸರ್ಕಾರಕ್ಕೆ ಬರಬೇಕಾದಂತಹ ವರಮಾನ ಬರುತ್ತಿಲ್ಲ. ಅದಕ್ಕೆ ಈ boarder areaದಲ್ಲಿ ಬಸವ ಕಲ್ಯಾಣವಾಗಲಿ, ಭಾಲ್ಕಿಯಾಗಲಿ ಎಲ್ಲಾ ಮಾಲು ಹೊರಗೆ ಹೋಗುತ್ತಿದೆ, ನಮ್ಮ ರಾಜ್ಯಕ್ಕೆ ಬರಬೇಕಾದಂತಹ ವರಮಾನ ಬರುತ್ತಿಲ್ಲ. ಇದರಿಂದ ಸರ್ಕಾರಕ್ಕೆ ಕೂಡ ನಷ್ಟವಾಗುತ್ತಿದೆ. ಅಲ್ಲಿ ರೈತಭವನಗಳು ಅಭಿವೃದ್ಧಿಯಾಗಿಲ್ಲ. ಅಲ್ಲಿ ರೈತಭವನ ಇದೆ. ಅಲ್ಲಿ ಬಿಲ್ಡಿಂಗ್ ಕಟ್ಟಿದ್ದಾರೆ, ಹಂದಿಗಳು ಬಹಳ ಓಡಾಡುತ್ತವೆ. ಅಲ್ಲಿ ಅದನ್ನು ಒಬ್ಬರು ಕೂಡ ನೋಡುವುದಿಲ್ಲ. ನಾನು ಮಾನ್ಯ ಮಂತ್ರಿಗಳಿಗೆ ಹೇಳುವುದೇನೆಂದರೆ ಒಂದು ರೈತ ಭವನಗಳ ಅಭಿವೃದ್ಧಿ ಮಾಡಬೇಕು. ಇನ್ನೊಂದು ವಿಚಾರವೇನೆಂದರೆ ಇವರು APMC ಯಿಂದ ಹತ್ತು ಮಳಿಗೆ ಕಟ್ಟಿದ್ದಾರೆ, ಅವು ಮೂರು ವರ್ಷದಿಂದ ಹಾಗೆ ಇವೆ. ಅಲ್ಲಿ ಅವುಗಳಿಗೆ ಕೀಲಿ ಹಾಕಿದ್ದಾರೆ. ಯಾರಿಗೆ ಕೊಡಬೇಕು ಎಂದು ಅವರು ಮಾಡಿದರು? ಈ ಎಲ್ಲಾ ಪರಿಸ್ಥಿತಿಯನ್ನು ಮಾನ್ಯ ಮಂತ್ರಿಗಳಿಗೆ ತಿಳಿಸಿದ್ದೇನೆ. ಈ ಎಲ್ಲಾ ಪರಿಸ್ಥಿತಿ ಬಗ್ಗೆ ಹೇಳಿದ್ದೇನೆ. ತಾವು ಅದರ ಬಗ್ಗೆ ಕ್ರಮ ತೆಗೆದುಕೊಂಡು ಬೇಗನೆ improve ಮಾಡುವುದಕ್ಕೆ ಪ್ರಯತ್ನ ಮಾಡಿ.

ಶ್ರೀ ಶಿವರಾಜ್ ಎಸ್ ತಂಗಡಗಿ: ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದಂತೆ ಸಾಲ ಬೇಕೆಂದು ಅವರ APMCಯಿಂದ ಯಾವುದೇ ಪ್ರಸ್ತಾವನೆ ನಮ್ಮ ಹತ್ತಿರ ಬಂದಿಲ್ಲ. ಆ ರೀತಿ ಪ್ರಸ್ತಾವನೆ ಬಂದರೆ ಯಾವ APMCನಲ್ಲಿ ದುಡ್ಡಿದೆ, ಅದನ್ನು ನೋಡಿಕೊಂಡು ಅದಕ್ಕೆ ಅನುಸಾರವಾಗಿ ಸಾಲವನ್ನು ಕೊಡುವಂತಹ ವ್ಯವಸ್ಥೆಯನ್ನು ಮಾಡಬಹುದು. ಮೂಲಭೂತ ಸೌಕರ್ಯಗಳ ಬಗ್ಗೆ ಏನು ಹೇಳಿದರು, ಗಡಿ ಭಾಗದಲ್ಲಿರುವಂತಹ APMC ಗಳಿಂದ ಬಹಳಷ್ಟು ಮಾಲು ಮಹಾರಾಷ್ಟ್ರಕ್ಕೆ ಹೋಗುತ್ತದೆ. ಅದು ನಮ್ಮ ಗಮನದಲ್ಲಿ ಇದೆ. ಮಹಾರಾಷ್ಟ್ರ ಭಾಗದಲ್ಲಿ ಚೆಕ್‌ಪೋಸ್ಟ್ ಹಾಕಿದರೆ ರೈತರಿಗೆ ತೊಂದರೆಯಾಗುತ್ತದೆಂದು ನಾವು ಮಾಡಿರಲಿಲ್ಲ. ಮಾನ್ಯ ಸದಸ್ಯರು ಸಹಕಾರ ಕೊಟ್ಟರೆ ಆ ಗಡಿ ಭಾಗದಲ್ಲಿ ಚೆಕ್‌ಪೋಸ್ಟ್‌ನ್ನು ಮಾಡಿ ಅದೇ APMCನಲ್ಲಿ ವ್ಯಾಪಾರ ವಹಿವಾಟುವಾಗುವ ರೀತಿಯಲ್ಲಿ ನಾವು ಕ್ರಮವನ್ನು ತೆಗೆದುಕೊಳ್ಳುತ್ತೇವೆ.